# ಬಾಂಧವ್ಯ ಬೆಸುಗೆಯ ಡೈವೋರ್ಸ್ ಲಾಯರ್

**ದುರ್ಗಶ್ರೀ ಎಸ್**
**ಕಲರ್ಸ್ ಕನ್ನಡದ 'ವಧು' ನಾಯಕಿ**



**◆ ಡೈವೋರ್ಸ್ ಅನ್ನುವ ಪದವೇ ನಿರಚನೆ ಅಥವಾ ನೆಗೆಟಿವ್ ಸೆನ್ಸ್ ಅನ್ನಿಸಲ್ವಾ?**

ಧನಾತ್ಮಕ ಮಾರ್ಗದಲ್ಲಿ ಲಾಯರ್ ವಧುಳನ್ನು ಇಲ್ಲಿ ಪರಿಚಯಿಸುತ್ತಿದ್ದಾರೆ. ಆಕೆ ಡೈವೋರ್ಸ್ ಲಾಯರ್ ನಿಜ. ಅವಳು ಸಂಬಂಧಗಳಿಗೆ ತುಂಬ ಗೌರವವನ್ನು ಕೊಡುತ್ತಾಳೆ. ಅವಳ ಹತ್ತಿರ ಬಂದವರು ಯಾರೂ ಡೈವೋರ್ಸ್ ತೆಗೆದುಕೊಂಡಿಲ್ಲ. ಭಿನ್ನಾಭಿಪ್ರಾಯದಿಂದ ಬಂದವರು ಸಂಬಂಧದ ಬೆಸುಗೆಯನ್ನು ಮತ್ತಷ್ಟು ಬಿಗಿಗೊಳಿಸಿಕೊಂಡಿದ್ದಾರೆ. ಪ್ರೋಮೊದಲ್ಲಿ ಟಿ.ಎನ್. ಸೀತಾರಾಮ್ 'ಡಿವೋರ್ಸ್ ಲಾಯರ್ ಆಗಿ ತಲೆ ಉಪಯೋಗಿಸಿ ಕೆಲಸ ಮಾಡಬೇಡ. ಮನಸು ಉಪಯೋಗಿಸು' ಎಂದು ಹೇಳುತ್ತಾರೆ. ಅದು ನನ್ನ ತಲೆಯಲ್ಲಿ ಉಳಿಸಿಕೊಂಡು ಕೆಲಸ ಮಾಡುವ ಸಲಹೆ.

**◆ ನೀವು ಹೇಗೆ ಈ ಪಾತ್ರವನ್ನು ಅನುಭವಿಸುತ್ತಿದ್ದೀರಿ?**

ವಧು ಪಾತ್ರವನ್ನು ಅಭಿನಯಿಸಲು ನನಗೆ ತುಂಬ ಅನುಕೂಲಗಳಿವೆ. ಈಗಾಗಲೇ ಸಾಮಾನ್ಯ ಹುಡುಗಿಯ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಈಕೆ ವೃತ್ತಿಪರ ಹುಡುಗಿ. ಗೌರವಾನ್ವಿತ ಲಾಯರ್, ಸ್ವಾಭಿಮಾನವುಳ್ಳ ಅವಳನ್ನು ದುಡ್ಡಿನಿಂದ ಅಳೆಯಲು ಸಾಧ್ಯವೇ ಇಲ್ಲ. ಪ್ರೀತಿ ವಿಶ್ವಾಸಕ್ಕೆ ಮಾತ್ರ ತಲೆಬಾಗುತ್ತಾಳೆ ಆಕೆ. ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುತ್ತಾಳೆ. ಅವಳ ಮನೆಯವರೇ ಕೇಡು ಬಯಸಿದರೂ ನಿಂದಿಸಿದರೂ ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ನನ್ನ ಕುಟುಂಬದ ಸದಸ್ಯರು ಎಂದು ಅಕ್ಕರೆಯಿಂದ ಅವರನ್ನು ನೋಡಿಕೊಳ್ಳುತ್ತಾಳೆ. ಮೂವತ್ತು ವರ್ಷ ಕಳೆದರೂ ಮದುವೆ ಆಗಿಲ್ಲ. ತಂದೆಯ ಆಸೆಯನ್ನೂ ಪೂರೈಸಲು ಸಾಧ್ಯ ಆಗಿಲ್ಲ ಎನ್ನುವ ಕೊರತೆಯೂ ಇದೆ. ಇಂತಹ ಏರಿಳಿತಗಳು ಇರುವ ಪಾತ್ರವನ್ನು ನಿರ್ವಹಿಸಲು ತುಂಬಾ ಖುಷಿ ಅನ್ನಿಸುತ್ತೆ.

**◆ ದಿಟ್ಟ ವಕೀಲೆ, ಮುಂದೆ ಅಳುಮುಂಜಿ ಆಗುವ ಸಾಧ್ಯತೆ ಏನಾದರೂ ಇದೆಯಾ?**

ನಮ್ಮ ಸುತ್ತಲಿನ ಪರಿಸರವನ್ನೇ ನೋಡಿ, ಹೆಣ್ಣು ಮಕ್ಕಳು ಭಾವುಕರಾಗಿ ಕುಗ್ಗುವುದು ಸಹಜ ಎನ್ನುವ ಅಂಶ ಕಾಣುತ್ತದೆ. ಇದು ವಾಸ್ತವ ಆದರೂ ವೃತ್ತಿಪರ ವಕೀಲೆ ವಧು ಧೈರ್ಯವಂತೆ, ಕುಗ್ಗಲ್ಲ. ಆದರೆ ಪರಿಸ್ಥಿತಿಯ ಕ್ರೌರ್ಯ ಮಾನವೀಯ ಮನಸ್ಸುಗಳನ್ನು ಕರಗಿಸುತ್ತದೆ. ಮನೋಸ್ಥೈರ್ಯವನ್ನು ಕುಗ್ಗಿಸುತ್ತದೆ. ಅಂತಹ ಸಂದರ್ಭ ಬಂದರೂ ಅಳುಮುಂಜಿ ಎನ್ನಲು ಆಗುವುದಿಲ್ಲ. ಸಮಯ ಸಂದರ್ಭ ವ್ಯಕ್ತಿತ್ವವನ್ನು ಬೇರೆ ರೂಪದಲ್ಲಿ ಪ್ರತಿಬಿಂಬಿಸುತ್ತದೆ. ಎದುರಾಗುವ ಪರಿಸ್ಥಿತಿಯನ್ನು ಕೆಲವರು ಎದುರಿಸಬಹುದು, ಕೆಲವರು ಆ ಸಂದರ್ಭಕ್ಕೆ ಹೊಂದಿಕೊಳ್ಳಬಹುದು. ಯಾವ ರೀತಿ ನಡೆದುಕೊಳ್ಳುತ್ತಾಳೆ ಎನ್ನುವುದು ಕಥೆಯನ್ನು ಅವಲಂಬಿಸಿರುತ್ತದೆ. ಅದನ್ನೇ ಪ್ರೇಕ್ಷಕರೂ ನಿರೀಕ್ಷೆ ಮಾಡುತ್ತಿರುತ್ತಾರೆ. ಆ ಕುತೂಹಲ ಇರಲಿ.

**◆ ನಿಮ್ಮ ಕನಸಿನ ಪಾತ್ರ ಯಾವುದು?**

ಇಂತಹದ್ದೇ ಎನ್ನುವ ನಿರ್ದಿಷ್ಟಕ್ಕಿಂತ ಒಳ್ಳೆಯ ಪಾತ್ರಗಳನ್ನು ಮಾಡಬೇಕು. ಆ ಮೂಲಕ ನೋಡುಗರ ಮನಸ್ಸು ಗೆಲ್ಲಬೇಕು. ಇದುವರೆಗಿನ ಪಾತ್ರಗಳು ಅಮ್ಮನ ಆಯ್ಕೆ. ಏನೇ ಇದ್ದರೂ ಒಂದು ಪಾತ್ರಕ್ಕೆ ಒಪ್ಪಿಗೆಯಾದರೆ ಅದಕ್ಕೆ ಸಂಪೂರ್ಣ ನ್ಯಾಯ ಕೊಡಬೇಕು ಎಂದುಕೊಂಡಿದ್ದೇನೆ.

**◆ ಸದ್ಯದ ಪರಿಸ್ಥಿತಿಯಲ್ಲಿ ಸಿನಿಮಾ ಬಗ್ಗೆ ನಿಮ್ಮ ಒಟ್ಟಾರೆ ನಿಲುವು ಏನಿದೆ?**

ಒಳ್ಳೆಯ ನಿರ್ಮಾಣ ಸಂಸ್ಥೆಯಿಂದ ಅವಕಾಶ ಬಂದರೆ ಖಂಡಿತ ಮಾಡುತ್ತೇನೆ. ಅಂತಹ ಅವಕಾಶ ಬರುತ್ತೆ ಅಂದರೆ ಅದು ನನ್ನ ಸೌಭಾಗ್ಯವೇ ಸರಿ. ಒಳ್ಳೆಯ ಕಥೆಯ ಸಾಕಷ್ಟು ಸಿನಿಮಾಗಳು ಬರುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಅವು ಏಕೆ ಯಶಸ್ವಿ ಆಗುತ್ತಿಲ್ಲ ಎನ್ನುವ ಪ್ರಶ್ನೆ ಕಾಡುತ್ತದೆ. ಆದರೂ ಒಳ್ಳೆಯ ಸಿನಿಮಾಗಳಿಗೆ ಯಶಸ್ಸು ಸಿಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವೆ. ಕನ್ನಡ ಸಿನಿಮಾಗಳು ಸೂಪರ್ ಹಿಟ್ ಆಗಬೇಕು ಎನ್ನುವುದು ನನ್ನ ಬಯಕೆ.

**◆ ಟೀವಿ ಪಯಣದ ಹಾದಿಯ ಹಿಂದಕ್ಕೆ ತಿರುಗಿದರೆ ಏನೆಲ್ಲ ಕಾಣುತ್ತದೆ?**

ನನ್ನ ಮೊದಲ ಧಾರಾವಾಹಿ ಉದಯದ 'ನೇತ್ರಾವತಿ'. ಅದನ್ನು ಅಪ್ಪು ಅವರ ಸಂಸ್ಥೆ ನಿರ್ಮಾಣ ಮಾಡಿತ್ತು. ಅವರು ಒಂದು ಕಂತಿನಲ್ಲಿ ನಾಯಕಿ ತುಂಬ ಚೆನ್ನಾಗಿ ಮಾಡಿದ್ದಾರೆ ಎಂದು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದು ನನಗೆ ಅತ್ಯಂತ ಖುಷಿ ಕೊಟ್ಟಿದೆ. ಏನೂ ಗೊತ್ತಿರದ ನನಗೆ ನಿರ್ದೇಶಕ ಸಂತೋಷ್ ಆತ್ಮವಿಶ್ವಾಸವನ್ನು ತುಂಬಿ ನಟನೆಯನ್ನು ಹೇಳಿಕೊಟ್ಟಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಅಪ್ಪ–ಅಮ್ಮನ ಪ್ರೋತ್ಸಾಹವಿದೆ. ಈ ಕ್ಷೇತ್ರದಲ್ಲಿ ಸಾಧಿಸಬೇಕು ಎನ್ನುವ ಛಲವಿದೆ. ಮೇಲುಕೋಟೆಯಲ್ಲಿ ಒಮ್ಮೆ ತೆಪ್ಪದಲ್ಲಿ ನಮ್ಮಿಬ್ಬರ ಪಯಣ. ನೀರಿನ ಹರಿವು ಜಾಸ್ತಿ ಇತ್ತು. ಡ್ರೋಣ್ ಶೂಟಿಂಗ್ ಅವತ್ತು ತುಂಬ ಭಯಪಟ್ಟಿದ್ದೆ. ಕೆಲಸ ಮಾಡುವಾಗ ಬೀಳುವುದು ಏಳುವುದು ಇದ್ದೇ ಇರುತ್ತದೆ.

**◆ ರಿಯಾಲಿಟಿ ಶೋಗೆ ಅವಕಾಶ ಬಂದರೆ?**

ಝೀ ತೆಲುಗುನಲ್ಲಿ ಡಾನ್ಸ್‌ಗೆ ಅವಕಾಶ ಬಂದಿತ್ತು. ಪ್ರತಿಸ್ಪರ್ಧಿ ವಾಹಿನಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಹೋಗಲು ಆಗಲಿಲ್ಲ. ಹಾಗೇನಾದರೂ ಅವಕಾಶ ಬಂದರೆ ನನಗೆ ಸಮಯದ ತೊಂದರೆ ಆಗಲಿಲ್ಲ ಅಂದರೆ ಖಂಡಿತ ಹೋಗುತ್ತೇನೆ. ಎಲ್ಲ ರೀತಿಯ ಅನುಭವ ಆಗಬೇಕು ಎನ್ನುವುದು ನನ್ನ ಅಪೇಕ್ಷೆ.

■ **ರಾಘವೇಂದ್ರ ಕೆ.**